ಈ ಚಾರ್ಜಿಂಗ್ ಗದ್ದಲಕ್ಕೆ ನನಗಂತೂ ತಲೆಕೆಟ್ಟು ವೈಯರ್‌ಲೆಸ್ ಹೆಡ್‌ಫೋನ್, ಕೀ ಬೋರ್ಡ್ ಇದ್ದಂತೆ ಚಾರ್ಜ್‌ಲೆಸ್ ಮೊಬೈಲ್ ಬರಬಹುದೇ ಎಂದು ಎದುರು ನೋಡುತ್ತಿದ್ದೇನೆ.

ಸುತ್ತುವ ನಾನು, ಆಸಕ್ತಿದಾಯಕ ಸಂಗತಿಗಳ ವೀಕ್ಷಣೆ, ಓದಿನಲ್ಲಿ ತೊಡಗಿರುವಾಗಲೇ ಬ್ಯಾಟರಿ ಕೈಕೊಟ್ಟು ರಸಭಂಗವಾಗುತ್ತದೆ. ಇದು ತಪಸ್ಸಿನಲ್ಲಿ ನಿರತರಾದ ಮುನಿಗಳಿಗೆ ತಪೋಭಂಗವಾದಂತೆ ಆಗುವುದು. ಆಗ ಚಾರ್ಜರ್ ಹುಡುಕಲು ಲಗುಬಗೆಯಿಂದ ಮನೆಯೊಳಗೆ ಓಡಾಡುವ ನನ್ನ ಗಡಿಬಿಡಿಯನ್ನು ಹೇಳಲಾಗದು. ಒಮ್ಮೊಮ್ಮೆ ಚಾರ್ಜರ್ ಸಿಕ್ಕರೆ, ಮೊಬೈಲ್ ಸಿಗದೆ (ಎದುರಿಗಿದ್ದರೂ ಕಣ್ಣಿಗೆ ಬೀಳದೆ!) ನನ್ನ ಹುಡುಕಾಟ ಮನೆಯ ಎಲ್ಲೆ ಮೀರದಂತಿದ್ದರೂ, ದಿಂಬಿನಡಿಯೋ, ಸೋಫಾ ಸೀಟಿನೊಳಗೊ ಅಡಗಿಕೊಂಡು ಮೊಬೈಲ್ ಚಾರ್ಜರ್ ಗಂಟೆಗಟ್ಟಲೆ ಕಣ್ಣಾ ಮುಚ್ಚಾಲೆ ಆಡುತ್ತಿರುತ್ತದೆ. ಆ ದಿವ್ಯ ಕ್ಷಣಗಳಲ್ಲಿಯೇ ಕಾಫಿ, ಟೀ ಕುಡಿದು, ಒಳ್ಳೆಯ ಸಂಗೀತದ ಕೇಳುವಿಕೆಯಿಂದ ಆಗುವ ನನ್ನ ನಿತ್ಯದ ಚಾರ್ಜ್‌ನ ಬಗ್ಗೆ ನಾನು ತತ್ತ್ವಚಿಂತನೆ ಮಾಡುವುದುಂಟು. ಚಾರ್ಜರ್‌ನ ಹುಡುಕಾಟ ನನ್ನ ಆತ್ಮಸಾಕ್ಷಾತ್ಕಾರದ ಗಳಿಗೆಯೂ ಹೌದು.

ಇನ್ನು, ವರ್ಕ್ ಫ್ರಂ ಹೋಮ್, ಆನ್‌ಲೈನ್ ಶಿಕ್ಷಣದ ಪರಿಣಾಮವಾಗಿ ಮನೆಯಲ್ಲಿರುವ ಅಷ್ಟೂ ಚಾರ್ಜಿಂಗ್ ಪಾಯಿಂಟುಗಳನ್ನು ನನ್ನ ಗಂಡ, ಮಕ್ಕಳು ಸ್ವಂತ ಸೈಟಿನಂತೆ ಆಕ್ರಮಿಸಿಕೊಂಡಿರುತ್ತಾರೆ. ಆ ಜಾಗದಲ್ಲಿ ಅವರದೆ ಲ್ಯಾಪ್‌ಟಾಪ್, ಟ್ಯಾಬ್, ಮೊಬೈಲ್ ಕುಳಿತಿರುತ್ತವೆ. ಆಗ ನನ್ನ ಮೊಬೈಲ್ ಒಮ್ಮೊಮ್ಮೆ ಅಡುಗೆಕೋಣೆಯ ಮಿಕ್ಸಿ ಪಾಯಿಂಟಿಗೆ ಯಾವುದೋ ಕೋನದಲ್ಲಿ ಜೋತಾಡಿಕೊಂಡು, ಅಡುಗೆ–ತಿಂಡಿಗಳ ಬಿಸಿ ಹಬೆ ಕುಡಿಯುತ್ತ ವಿದ್ಯುತ್ ಸಂಚಯ ಮಾಡಿಸಿಕೊಳ್ಳುತ್ತದೆ. ಆಗೆಲ್ಲ ನನ್ನ ಗೊಣಗಾಟ ನಮ್ಮ ಬಾಡಿಗೆ ಮನೆ ಮೇಲೆ ಹರಿದು, “ರೀ! ನಮ್ಮ ಸ್ವಂತ ಮನೆ ಆದ್ರೆ, ಮನೆ ಪೂರ್ತಿ ಚಾರ್ಜಿಂಗ್ ಸಾಕೆಟ್‌ಗಳನ್ನ ಇಡಿಸಿಬಿಡೋಣ, ಕಣ್ರೀ” ಎಂದು ಗಂಡನ ಕಿವಿಗೆ ಬೀಳುವಂತೆ ಮಾಡುವ ಭೀಷಣ ಪ್ರತಿಜ್ಞೆಯೊಂದಿಗೆ ಕೊನೆಗೊಳ್ಳುತ್ತದೆ. ಒಮ್ಮೊಮ್ಮೆ ಊರಿಂದ ನೆಂಟರು ಬಂದಾಗ ನಮ್ಮನೆಯ ಹೈಫೈ ಅಡಾಪ್ಟರ್‌ಗಳು ಸಹ ಅಡ್ಜಸ್ಟ್ ಮಾಡಿಕೊಂಡು ತಮ್ಮ ನವರಂಧ್ರಗಳಿಗೂ ಸಿಕ್ಕಿಸಿದ ಮೊಬೈಲುಗಳಿಗೆ ವಿದ್ಯುತ್ ಹರಿಸಿ, ತಾವೂ ಅತಿಥಿ ಸತ್ಕಾರದಲ್ಲಿ ಪಾಲ್ಗೊಳ್ಳುವುದುಂಟು!

ಲ್ಯಾಂಡ್‌ಲೈನ್ ಫೋನು ಮಾತ್ರ ಇದ್ದ ಕಾಲದಲ್ಲಿ ಇಂತಹ ಚಾರ್ಜಿಂಗ್ ಕಾಟ ಇರುತ್ತಿರಲಿಲ್ಲ. ಕೂತಲ್ಲೇ ಗಂಭೀರವಾಗಿ ಕೂರುವ ಅದರ ಮುಂದೆ ಕೂತು ನಾವು ಕಷ್ಟ ಸುಖ ಮಾತಾಡಿಕೊಳ್ಳುತ್ತಿದ್ದೆವು. ಅನಂತರ ಕಾರ್ಡ್‌ಲೆಸ್ ರಿಸೀವರ್ ಬಳಕೆಗೆ ಬಂದರೂ ಮನೆಯ ಹೊಸ್ತಿಲಿನೊಳಗೇ ಸುತ್ತಾಡಿಕೊಂಡು ಮಾತಾಡಿದ ಬಳಿಕ ಅದನ್ನು ಸ್ವಸ್ಥಾನಕ್ಕೆ ಸೇರಿಸುತ್ತಿದ್ದೆವು. ಈಗಿನ ಹಾಗೆ ಕೈಗೂಸಿನಂತೆ ದಿನಪೂರ್ತಿ ಮೊಬೈಲನ್ನು ಹಿಡಿದು ಓಡಾಡುತ್ತಿರಲಿಲ್ಲ.

ನಮ್ಮ ಮನೆಯ ನಾಲ್ಕು ಜನ ಸದಸ್ಯರ ಆರು ಮೊಬೈಲುಗಳಿವೆ. ದಿನ ಬೆಳಗಾದರೆ ಮನೆಯಲ್ಲಿರುವ ಎಲ್ಲ ಕರೆಂಟು ಸಾಕೆಟ್‌ಗಳಿಗೆ ಆ ಆರೂ ಮೊಬೈಲುಗಳ ಚಾರ್ಜರ್‌ಗಳು ಕರಿ ನಾಗರಗಳಂತೆ ನೇತಾಡಿಕೊಂಡಿರುವ ದೃಶ್ಯ ಮಾಮೂಲಿ. ಪತ್ರಿಕೆಗಳನ್ನು ಹಿಡಿದು ಓದಿದ ಅನುಭವ ಬರಲು ಐಪ್ಯಾಡ್,